# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 05
2. ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04-07-2023
4. ಉತ್ತರಿಸುವ ಸಚಿವರು : ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಎಷ್ಟು ನಗರಗಳಲ್ಲಿ ಜಲಸಿರಿ ಯೋಜನೆ ಜಾರಿಯಲ್ಲಿದೆ; ಈ ಜಲಸಿರಿ ಯೋಜನೆಗೆ ಬಿಡುಗಡೆಯಾದ ಅನುದಾನದ ಮೊತ್ತ ಎಷ್ಟು; ಬಳಕೆಯಾದ ಅನುದಾನ ಎಷ್ಟು; (ನಗರವಾರು ಮತ್ತು ಹಂತವಾರು ವಿವರ ನೀಡುವುದು) | • ಕೆಯುಐಡಿಎಫ್‌ಸಿ ವತಿಯಿಂದ ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನ ಜಲಸಿರಿ ಯೋಜನೆಯನ್ನು (ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಮತ್ತು ಹೂಡಿಕೆ ಕಾರ್ಯಕ್ರಮದಡಿ-ಕ್ವಿಮಿಪ್) ರಾಜ್ಯದ ಆಯ್ದ 8 ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br>• ಜಲಸಿರಿ ಯೋಜನೆಯನ್ನು 2 ಟ್ರಾಂಚ್‌ಗಳಾಗಿ ವಿಂಗಡಿಸಲಾಗಿದ್ದು, ಟ್ರಾಂಚ್-1 ನಾಲ್ಕು ನಗರ ಸ್ಥಳೀಯ ಸಂಸ್ಥೆಗಳಾದ ದಾವಣಗೆರೆ, ಹರಿಹರ, ರಾಣಿಬೆನ್ನೂರು ಮತ್ತು ಬ್ಯಾಡಗಿ ನಗರ/ ಪಟ್ಟಣಗಳನ್ನು ಒಳಗೊಂಡಿರುತ್ತದೆ.<br>• ಟ್ರಾಂಚ್-2 ನಾಲ್ಕು ನಗರ ಸ್ಥಳೀಯ ಸಂಸ್ಥೆಗಳಾದ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ನಗರ/ ಪಟ್ಟಣಗಳನ್ನು ಒಳಗೊಂಡಿರುತ್ತದೆ.<br>ಈ ಯೋಜನೆಗೆ ನಗರವಾರು ಬಿಡುಗಡೆಯಾದ ಅನುದಾನ ಮತ್ತು ಬಳಕೆಯಾದ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| (ಆ) | ಜಲಸಿರಿ ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆಗೆ ಈವರೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಸದರಿ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನಕ್ಕೆ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆಯೇ, ಈವರೆಗೆ ಎಷ್ಟು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಪ್ರತಿ ಕಾಮಗಾರಿಗಳಿಗೆ ಅನುಮೋದನೆಯಾದ ಟೆಂಡರ್ ಮೊತ್ತವೆಷ್ಟು, ಎಷ್ಟು ಕಾಮಗಾರಿಗಳಿಗೆ ಆದೇಶ ನೀಡಲಾಗಿದೆ; ಕಾಮಗಾರಿ ಗುತ್ತಿಗೆ ಪಡೆದ ಸಂಸ್ಥೆಗಳಾವುವು? (ಸಂಪೂರ್ಣ ವಿವರ ನೀಡುವುದು) | ಜಲಸಿರಿ ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆಗೆ ಈವರೆಗೆ 10 ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ರೂ.546.29 ಕೋಟಿಗಳು.<br>ಜಲಸಿರಿ ಯೋಜನೆಯಡಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಗುತ್ತಿಗೆ ಮೊತ್ತದ ರೂ.937.98 ಕೋಟಿಗಳಲ್ಲಿ ಒಟ್ಟು 10 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>ಎಲ್ಲಾ 10 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿ ಕಾರ್ಯಾದೇಶ ನೀಡಲಾಗಿರುತ್ತದೆ. ಈವರೆಗೆ 02 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾಮಗಾರಿಗಳ ಸಂಪೂರ್ಣ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಇ) | ಸದರಿ ಕಾಮಗಾರಿಗಳ ಕರಾರು ಅವಧಿಯೆಷ್ಟು; ಮುಕ್ತಾಯಗೊಂಡ, ಪ್ರಗತಿಯಲ್ಲಿರುವ ಮತ್ತು ಪ್ರಾರಂಭಗೊಳ್ಳದ ಕಾಮಗಾರಿಗಳೆಷ್ಟು; ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು; ಟೆಂಡರ್ ಕರಾರುಗಳಂತೆ ಕಾಮಗಾರಿಗಳು ನಡೆದಿದೆಯೇ; (ವಾರ್ಡ್‌ವಾರು ಸಂಪೂರ್ಣ ವಿವರ ನೀಡುವುದು) | ಕಾಮಗಾರಿಗಳ ಕರಾರು ಅವಧಿ ವಿವರ **ಅನುಬಂಧ-2** ರಲ್ಲಿ ನೀಡಲಾಗಿದೆ. ಸದರಿ ಕಾಮಗಾರಿಗಳಲ್ಲಿ 02 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಉಳಿದ 8 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಎಲ್ಲಾ ಕಾಮಗಾರಿಗಳು ಪ್ರಾರಂಭಗೊಂಡಿರುತ್ತವೆ.<br>ನಿರಂತರ ನೀರು ಸರಬರಾಜು ಕಾಮಗಾರಿಯನ್ನು ಮಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 60 ವಾರ್ಡ್‌ಗಳಲ್ಲಿಯೂ ಅನುಷ್ಠಾನಗೊಳಿಸಲಾಗುತ್ತಿದೆ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಗಾಗಿ 54 ವಲಯಗಳನ್ನಾಗಿ ವಿಂಗಡಿಸಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರತ್ಯೇಕವಾಗಿ ವಾರ್ಡ್‌ವಾರು ಅನುದಾನ ಹಂಚಿಕೆಯಾಗಿರುವುದಿಲ್ಲ. |
| (ಈ) | ಸದರಿ ಕಾಮಗಾರಿಗಳಲ್ಲಿ ಹಣ ಪಾವತಿಸಲಾದ ಕಾಮಗಾರಿಗಳು ಯಾವುವು; ಪಾವತಿಸಲಾದ ಮೊತ್ತವೆಷ್ಟು; ಪಾವತಿಸಲು ಬಾಕಿಯಿರುವ ಮೊತ್ತವೆಷ್ಟು; (ವಾರ್ಡ್‌ವಾರು ಸಂಪೂರ್ಣ ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆಯು ಒಳಚರಂಡಿ ವ್ಯವಸ್ಥೆಯ ನಿರ್ವಹಣೆಗಾಗಿ 13 ವಲಯಗಳನ್ನಾಗಿ ವಿಂಗಡಿಸಲಾಗಿದೆ. ಜಲಸಿರಿ ಯೋಜನೆಯಲ್ಲಿ ಒಳಚರಂಡಿ ಕಾಮಗಾರಿಗಳನ್ನು ವಲಯ 1, 2, 3, 4, 5, 7, 9, 12 & 13 ರಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತ್ಯೇಕವಾಗಿ ವಾರ್ಡ್‌ವಾರು ಅನುದಾನ ಹಂಚಿಕೆಯಾಗಿರುವುದಿಲ್ಲ.<br>ಎಲ್ಲಾ ಕಾಮಗಾರಿಗಳನ್ನು ಟೆಂಡರ್ ಕರಾರಿನನ್ವಯ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾಮಗಾರಿಗಳಿಗೆ ಪಾವತಿಸಲು ಬಾಕಿಯಿರುವ ಮೊತ್ತದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| (ಉ) | ಇಲ್ಲಿಯವರೆಗೆ ಮಂಗಳೂರು ನಗರದ ಎಷ್ಟು ವಾರ್ಡ್‌ಗಳಲ್ಲಿ ಎಷ್ಟು ಪ್ರತಿಶತ ಮನೆಗಳಿಗೆ 24/7 ಕುಡಿಯುವ ನೀರು ಸಂಪರ್ಕ ಕಲ್ಪಿಸಲಾಗಿದೆ; ವಾರ್ಡುವಾರು ಮತ್ತು ನಗರ ಪಾಲಿಕೆಯ ಒಟ್ಟು ನೀರು ಸಂಪರ್ಕಗಳ ಸಂಖ್ಯೆ ಸಹಿತ ವಿವರ ನೀಡುವುದು; | ಜಲಸಿರಿ ಯೋಜನೆಯಡಿ ಮಂಗಳೂರು 24/7 ನಿರಂತರ ನೀರು ಸರಬರಾಜು ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ದಿನಾಂಕ:24.05.2024 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.<br>ಸದರಿ ಕಾಮಗಾರಿಯಲ್ಲಿ ಹೊಸ ಮೀಟರ್ ಅಳವಡಿಸುವುದರೊಂದಿಗೆ 82,849 (ಹಾಲಿ ಸಂಪರ್ಕಗಳನ್ನು ಒಳಗೊಂಡಂತೆ) ನಳ ಸಂಪರ್ಕ ಕಲ್ಪಿಸಬೇಕಾಗಿದ್ದು, ಈವರೆಗೆ 13,088 ನಳ ಸಂಪರ್ಕವನ್ನು ಕಲ್ಪಿಸಲಾಗಿದೆ.<br>ನಿರಂತರ ನೀರು ಸರಬರಾಜು ನಿರ್ವಹಣೆಗಾಗಿ ಮಹಾನಗರ ಪಾಲಿಕೆಯ 60 ವಾರ್ಡ್‌ಗಳನ್ನು 54 ವಲಯಗಳನ್ನಾಗಿ ವಿಂಗಡಿಸಿದ್ದು ಪ್ರಸ್ತುತ intermittent ನೀರು ಸರಬರಾಜು ವ್ಯವಸ್ಥೆ ಇದ್ದು, ಕಾಮಗಾರಿ ಪೂರ್ಣಗೊಂಡ ನಂತರ 24/7 ನೀರು ಒದಗಿಸಲು ಕ್ರಮವಹಿಸಲಾಗುವುದು. ವಲಯವಾರು ಅಳವಡಿಸಿರುವ ನಳ ಸಂಪರ್ಕವನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಊ) | ಮಂಗಳೂರು ಜಲಸಿರಿ ಯೋಜನೆಯಡಿ ಕಳಪೆ ಕಾಮಗಾರಿ ಕುರಿತಂತೆ ದೂರು ದಾಖಲಾಗಿದೆಯೇ; ದೂರು ದಾಖಲಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಸದರಿ ಯೋಜನೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಅಮೃತ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನಾ ಸಮಾಲೋಚಕರು ಮತ್ತು ಯೋಜನಾ ಅನುಷ್ಠಾನ ಘಟಕದ ಮೇಲ್ವಿಚಾರಣೆಯಲ್ಲಿ ಕಾಮಗಾರಿಗಳನ್ನು ಅನುಷ್ಠಾಗೊಳಿಸಲಾಗುತ್ತಿದೆ. ಕಳಪೆ ಕಾಮಗಾರಿ ಕುರಿತಂತೆ ಯಾವುದೇ ದೂರು ದಾಖಲಾಗಿರುವುದಿಲ್ಲ. |

ಕಡತ ಸಂಖ್ಯೆ: ನಅಇ 85 ಪಿ.ಆರ್.ಜೆ 2023

( ಬಿ. ಎಸ್. ಸುರೇಶ )

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

ಅನುಬಂಧ-1

| ಕ್ರ.ಸಂ. | ನಗರ/ಪಟ್ಟಣ | ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ) | ಬಳಕೆಯಾದ ಅನುದಾನ (ರೂ. ಕೋಟಿಗಳಲ್ಲಿ) |
|---|---|---|---|
| 1 | ದಾವಣಗೆರೆ | ಜಲಸಿರಿ ಯೋಜನೆಗೆ ನಗರವಾರು ಅನುದಾನವು ಬಿಡುಗಡೆಯಾಗಿರುವುದಿಲ್ಲ. ಒಟ್ಟಾರೆ ಜಲಸಿರಿ ಯೋಜನೆಗೆ ಈ ವರೆಗೆ ರೂ.1966.28 ಕೋಟಿಗಳು ಬಿಡುಗಡೆ ಯಾಗಿರುತ್ತದೆ. | 582.46 |
| 2 | ಹರಿಹರ | | 141.89 |
| 3 | ಬ್ಯಾಡಗಿ | | 92.60 |
| 4 | ರಾಣೇಬೆನ್ನೂರು | | 155.10 |
| 5 | ಮಂಗಳೂರು | | 546.29 |
| 6 | ಉಡುಪಿ | | 173.75 |
| 7 | ಪುತ್ತೂರು | | 68.20 |
| 8 | ಕುಂದಾಪುರ | | 26.99 |
| | | ಒಟ್ಟು | 1787.28 |

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ
ಬೆಂಗಳೂರು

ಅನುಬಂಧ–2

ಟ್ರಾಂಚ್–2

| ಕ್ರಮ ಸಂಖ್ಯೆ | ನಗರ/ಪಟ್ಟಣ | ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಗುತ್ತಿಗೆಯ ಮೊತ್ತ (ಕೋಟಿಗಳಲ್ಲಿ) | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ | ಭೌತಿಕ ಪ್ರಗತಿ | ಪಾವತಿಸಲಾದ ಮೊತ್ತ (ಕೋಟಿಗಳಲ್ಲಿ) | ಪಾವತಿಸಲು ಬಾಕಿ ಇರುವ ಮೊತ್ತ (ಕೋಟಿಗಳಲ್ಲಿ) |
|---|---|---|---|---|---|---|---|---|---|
| 1 | ಮಂಗಳೂರು | 24x7 ಕುಡಿಯುವ ನೀರು ಸರಬರಾಜು ಕಾಮಗಾರಿ | ಮೆ/ಸೂಯಜ್ ಪ್ರಜೆಕ್ಟ್ –ಸೂಯಜ್ ಇಂಡಿಯಾ ಪ್ರೈ.ಲಿ– ಡಿ.ಆರ್.ಎಸ್ ಇನ್ಫ್ರಾಟೆಕ್ ಪ್ರೈ.ಲಿ(ಜೆ.ವಿ) | 586.15 | 24.12.2019 | 24.05.2024 | 41.48% | 296.76 | 289.39 |
| 2 | | ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ | ಮೆ/ಡಿ.ಆರ್.ಎಸ್ ಇನ್ಫ್ರಾಟೆಕ್ ಪ್ರೈ.ಲಿ | 84.56 | 06.06.2018 | 27.07.2021 | ಕಾಮಗಾರಿ ಪೂರ್ಣಗೊಂಡಿರುತ್ತದೆ | 84.56 | – |
| 3 | | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 3&5) | ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ | 22.40 | 28.01.2020 | 31.12.2023 | 86.13% | 18.22 | 4.18 |
| 4 | | ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ | 23.59 | 28.01.2020 | 31.12.2023 | 68.60% | 14.50 | 9.09 |
| 5 | | ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | ಮೆ/ಕಬಿಆರ್ ಇನ್ಫ್ರಾಟೆಕ್ ಪ್ರೈ.ಲಿ | 77.59 | 06.06.2018 | 31.03.2023 | ಕಾಮಗಾರಿ ಪೂರ್ಣಗೊಂಡಿದ್ದು Trial run ಹಂತದಲ್ಲಿರುತ್ತದೆ. | 77.59 | – |
| 6 | | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4&7) ಮಂಗಳೂರು–2 | ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ | 44.53 | 06.03.2019 | 04.06.2022 | ಗುತ್ತಿಗೆಯನ್ನು ರದ್ದುಗೊಳಿಸಲಾಗಿದ್ದು ಮರುಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. | 14.88 | – |
| | | | ಮೆ/ಕಬಿಆರ್ ಇನ್ಫ್ರಾಟೆಕ್ ಪ್ರೈ.ಲಿ | 30.59 | 16.02.2023 | 15.08.2024 | 6.07% | 0.39 | 30.20 |

| ಕ್ರಮ ಸಂಖ್ಯೆ | ನಗರ/ಪಟ್ಟಣ | ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಗುತ್ತಿಗೆಯ ಮೊತ್ತ (ಕೋಟಿಗಳಲ್ಲಿ) | ಪ್ರಾರಂಭ ದಿನಾಂಕ | ಮುಕ್ತಾಯ ದಿನಾಂಕ | ಭೌತಿಕ ಪ್ರಗತಿ | ಪಾವತಿಸಲಾದ ಮೊತ್ತ (ಕೋಟಿಗಳಲ್ಲಿ) | ಪಾವತಿಸಲು ಬಾಕಿ ಇರುವ ಮೊತ್ತ (ಕೋಟಿಗಳಲ್ಲಿ) |
|---|---|---|---|---|---|---|---|---|---|
| 7 | | ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) ಮಂಗಳೂರು-3 | ಮೆ/ಸಿಂಪ್ಲೆಕ್ಸ್ ಇನ್ಫ್ರಾಟೆಕ್ ಪ್ರೈ.ಲಿ | 32.77 | 06.03.2019 | 05.06.2022 | ಗುತ್ತಿಗೆಯನ್ನು ರದ್ದುಗೊಳಿಸಲಾಗಿದ್ದು ಮರುಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. | 5.60 | – |
| | | | ಮೆ/ಕೆಜಿಆರ್ ಇನ್ಫ್ರಾಟೆಕ್ ಪ್ರೈ.ಲಿ | 22.65 | 16.02.2023 | 15.08.2024 | 10.19% | 0.58 | 22.07 |
| 8 | | ಸಗಟು ನೀರು ಸರಬರಾಜು ಕಾಮಗಾರಿ | ಮೆ/ಎಸ್‌ಎಂಸಿ ಇನ್ಫ್ರಾಟೆಕ್ ಪ್ರೈ.ಲಿ. | 35.29 | 05.03.2019 | 30.06.2023 | 86.73% | 32.52 | 2.77 |
| 9 | | ಒಳಚರಂಡಿ ವ್ಯವಸ್ಥೆ ಕಲ್ಪಿಸದ ವಲಯ 3&5 ರಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಒಳಚರಂಡಿ ಪುನರ್ವಸತಿ/ಪುನರ್‌ನಿರ್ಮಾಣ ಕಾಮಗಾರಿ | ಮೆ/ಸಿವಿಕೆ ಇನ್ಫ್ರಾಟೆಕ್ ಪ್ರೈ.ಲಿ. | 19.05 | 17.02.2023 | 16.08.2024 | 13.93% | 0.69 | 18.36 |
| 10 | | ಮಂಗಳೂರು ನಗರದ ವಲಯ 12ರ ಕಾಲೋನಿಗೆ ಒಳಚರಂಡಿ ವ್ಯವಸ್ಥೆ & ವಲಯ 13 ರಲ್ಲಿ ವೆಟ್‌ವೆಲ್ ನಿರ್ಮಾಣ | ಮೆ/ಸಿವಿಕೆ ಇನ್ಫ್ರಾಟೆಕ್ ಪ್ರೈ.ಲಿ. | 15.63 | 17.02.2023 | 16.02.2025 | 2.53% | – | 15.63 |

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ
ಬೆಂಗಳೂರು

ಅನುಬಂಧ-3

| ಕ್ರ.ಸಂ | ವಲಯ ಸಂಖ್ಯೆ | ವಲಯ | ಒಟ್ಟು ನಳ ಸಂಪರ್ಕಗಳ ಸಂಖ್ಯೆ | ಪೂರ್ಣಗೊಂಡ ನಳ ಸಂಪರ್ಕಗಳ ಸಂಖ್ಯೆ | ಬಾಕಿ ಇರುವ ನಳ ಸಂಪರ್ಕಗಳ ಸಂಖ್ಯೆ |
|---|---|---|---|---|---|
| 1 | Zone 1 | Marakada | 719 | 34 | 685 |
| 2 | Zone 1A | Kunjathbail | 2119 | 68 | 2051 |
| 3 | Zone 2 | Bondel | 1623 | 460 | 1163 |
| 4 | Zone 2A | MV Shetty | 1642 | 429 | 1213 |
| 5 | Zone 3 | Soojikal | 1847 | 55 | 1792 |
| 6 | Zone 3A | Nekkilagudda | 1698 | 25 | 1673 |
| 7 | Zone 4 | Manyhill | 1653 | 477 | 1176 |
| 8 | Zone 4A | Many hill OHT | 3019 | 442 | 2577 |
| 9 | Zone 5 | Padavinangadi | 1520 | 97 | 1423 |
| 10 | Zone 5A | Santhoshnagara | 1266 | 232 | 1034 |
| 11 | Zone 6 | Kodikal | 2658 | 16 | 2642 |
| 12 | Zone 6A | Kodikal OHT | 3081 | 205 | 2876 |
| 13 | Zone 7 | Chilmbi Old | 1454 | 30 | 1424 |
| 14 | Zone 7A | Chilmbi New | 1519 | 74 | 1445 |
| 15 | Zone 8 | Circuit House | 1337 | 305 | 1032 |
| 16 | Zone 9 | Paduva | 1098 | 77 | 1021 |
| 17 | Zone 10 | Shakthi Nagar | 3635 | 368 | 3267 |
| 18 | Zone 10A | Shakthi Nagar OHT | 1158 | 150 | 1008 |
| 19 | Zone 11 | Ladyhill | 2101 | 107 | 1994 |
| 20 | Zone 12 | Bendoor | 3891 | 346 | 3545 |
| 21 | Zone 13 | Bendoor | 1588 | 134 | 1454 |
| 22 | Zone 14 | Light House Hill | 479 | 43 | 436 |
| 23 | Zone 15 | Bendoor | 920 | 137 | 783 |
| 24 | Zone 16 | Bikarnakatte | 1362 | 112 | 1250 |
| 25 | Zone 16 A | Holyhill | 1458 | 148 | 1310 |
| 26 | Zone 17 | Nehru Maidan | 2081 | 186 | 1895 |
| 27 | Zone 18 | Bendoor | 1217 | 54 | 1163 |
| 28 | Zone 18A | Nandigudda | 2631 | 751 | 1880 |
| 29 | Zone 18B | Morgan's Gate | 4194 | 954 | 3240 |
| 30 | Zone 18C | Bendoor | 585 | 463 | 122 |
| 31 | Zone 19 | Valencia | 1283 | 264 | 1019 |
| 32 | Zone 20 | Padil | 997 | 9 | 988 |
| 33 | Zone 20A | Padil | 1164 | 7 | 1157 |
| 34 | Zone 21 | Utlas Nagar | 1985 | 89 | 1896 |
| 35 | Zone 21A | JM Road | 3467 | 168 | 3299 |
| 36 | Zone 22 | Sister Colony | 987 | 19 | 968 |
| 37 | Zone 23 | Kudupu | 1350 | 194 | 1156 |
| 38 | Zone 24 | Mangala Jyothi | 751 | 132 | 619 |
| 39 | Zone 24A | Amruth Nagar | 993 | 559 | 434 |
| 40 | Zone 25 | NITK New | 1225 | 409 | 816 |
| 41 | Zone 25A | Udaya Nagar | 268 | 20 | 248 |

| ಕ್ರ.ಸಂ | ವಲಯ ಸಂಖ್ಯೆ | ವಲಯ | ಒಟ್ಟು ನಳ ಸಂಪರ್ಕಗಳ ಸಂಖ್ಯೆ | ಪೂರ್ಣಗೊಂಡ ನಳ ಸಂಪರ್ಕಗಳ ಸಂಖ್ಯೆ | ಬಾಕಿ ಇರುವ ನಳ ಸಂಪರ್ಕಗಳ ಸಂಖ್ಯೆ |
|---|---|---|---|---|---|
| 42 | Zone 26 | NITK | 233 | 197 | 36 |
| 43 | Zone 27 | Govindas College | 926 | 222 | 704 |
| 44 | Zone 27A | Minakaliya | 1216 | 234 | 982 |
| 45 | Zone 28 | Padupadavu | 705 | 130 | 575 |
| 46 | Zone 28A | Kodipady | 347 | 63 | 284 |
| 47 | Zone 29 | Krlshnapura | 783 | 235 | 548 |
| 48 | Zone 29A | Krishnapura | 1489 | 506 | 983 |
| 49 | Zone 30 | Vishwanath Temple | 1519 | 492 | 1027 |
| 50 | Zone 31 | Bala | 2341 | 1080 | 1261 |
| 51 | Zone 32 | Kana | 2761 | 1050 | 1711 |
| 52 | Zone 33 | Panambur Bengre | 246 | 30 | 216 |
| 53 | Zone 33A | Panambur Bengre | 43 | 0 | 43 |
| 54 | Zone 34 | Industrial Area | 217 | 0 | 217 |
| | | ಒಟ್ಟು | 82849 | 13088 | 69761 |

ವ್ಯವಸ್ಥಾಪಕ ನಿರ್ದೇಶಕರು
ಕೆಯುಐಡಿಎಫ್‌ಸಿ
ಬೆಂಗಳೂರು